ಮೇಲೆ ಹೂಡಿರುವ ಮೊಕದ್ದಮೆಗಳ ಪೈಕಿ 3 ಮೊಕದ್ದಮೆಗಳು ಇತ್ಯರ್ಥವಾಗದೇ ನ್ಯಾಯಾಲಯದ ಮುಂದೆ ಬಾಕಿ ಇರುವುದು ನಿಜವಲ್ಲವೇ?

ಅ) ಹಾಗಿದ್ದಲ್ಲಿ ಈ ಪ್ರಕರಣಗಳಲ್ಲಿ ಭಾಗಿಯಾಗಿರುವವರಗಳ ಹೆಸರು ಹಾಗೂ ಬೂತ್‌ನ ವಿವರಗಳೇನು?

ಇ) ಇಂತಹ ಮೊಕದ್ದಮೆಗಳು ಹಲವಾರು ವರ್ಷಗಳಿಂದ ಬಾಕಿ ಇದ್ದು ಇವುಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸದಿರಲು ಕಾರಣಗಳೇನು?

ಈ) ಕಳೆದ 5 ವರ್ಷಗಳಲ್ಲಿ ಇಂತಹ ಎಷ್ಟು ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ? ಈ ಪ್ರಕರಣಗಳ ಪೈಕಿ ಎಷ್ಟು ಪ್ರಕರಣಗಳಲ್ಲಿ ತೀರ್ಪು 9 ಮಹಾನಗರ ಪಾಲಿಕೆಯ ಪರವಾಗಿ ಬಂದಿದೆ ಹಾಗೂ ಎಷ್ಟು ವಿರುದ್ಧವಾಗಿ ಬಂದಿವೆ (ಪ್ರಕರಣಗಳ ಪೂರ್ಣ ವಿವರಗಳನ್ನು ಒದಗಿಸುವುದು)

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಹೌದು.

ಆ) 1. ಸಿ. ಕುಮಾರ್ ಮತ್ತು ಎಸ್.ಎಂ. ಅಪ್ಪಚ್ಚು, 201, ಗಾಂಧಿನಗರ (ಸಿಸಿ 765:99)

2. ವಿವೇಕ, 706 ಹೊಂಬೇಗೌಡನಗರ (ಸಿಸಿ 1279:99)

3. ಭದ್ರಯ್ಯ ಮತ್ತು ರುದ್ರಪ್ಪ 106, ವಿಜಯನಗರ, (ಸಿಸಿ 695:99)

4. ಶ್ರೀಧರ್, 714, ಬನಶಂಕರಿ 2ನೇ ಹಂತ (ಸಿಸಿ 480:2000)

ಇ) ನ್ಯಾಯಾಲಯವು ಇತ್ಯರ್ಥಪಡಿಸಬೇಕಾಗಿರುತ್ತದೆ. ಇಂತಹ ಪ್ರಕರಣಗಳನ್ನು ಬೇಗನೆ ಇತ್ಯರ್ಥಪಡಿಸಲು ನ್ಯಾಯಾಲಯವನ್ನು ಕೋರಲಾಗುವುದು.

ಈ) ಯಾವುದೇ ಮೊಕದ್ದಮೆ ಇತ್ಯರ್ಥವಾಗಿರುವುದಿಲ್ಲ.

ಜಲಸಂವರ್ಧನ ಯೋಜನೆಯಡಿಯಲ್ಲಿ ಕೆರೆಗಳ ಹೂಳೆತ್ತುವುದು

5089 - ಶ್ರೀ ಪ್ರಕಾಶ ಖಂಡ್ರೆ (ಭಾಲ್ಕಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಲ ಸಂವರ್ಧನ ಯೋಜನೆಯನ್ನು ಎಂದು ಪ್ರಾರಂಭಿಸಲಾಯಿತು? ಈ ಯೋಜನೆಯ ಉದ್ದೇಶಗಳೇನು? ಇದಕ್ಕಾಗಿ ಬಜೆಟ್‌ನಲ್ಲಿ ಮೀಸಲಾಗಿಟ್ಟಿರುವ ಹಣವೆಷ್ಟು? ಇಲ್ಲಿಯವರೆವಿಗೆ ಖರ್ಚು ಮಾಡಲಾಗಿರುವ ಹಣವೆಷ್ಟು? (ಜಿಲ್ಲಾವಾರು ಅಂಕಿಅಂಶಗಳನ್ನು ಒದಗಿಸುವುದು)

ಆ) ಈ ಯೋಜನೆಯಡಿಯಲ್ಲಿ ಬೀದರ್ ಜಿಲ್ಲೆಯಲ್ಲಿ ವಿಶೇಷವಾಗಿ ಭಾಲ್ಕಿ ಮತಕ್ಷೇತ್ರದಲ್ಲಿ ಎಷ್ಟು ಕೆರೆಗಳ ಹೂಳನ್ನು ಇಲ್ಲಿಯವರೆವಿಗೆ ಎತ್ತಿ ದುರಸ್ತಿ ಮಾಡಲಾಗಿದೆ (ಪೂರ್ಣ ವಿವರಗಳನ್ನು ಒದಗಿಸುವುದು)

ಇ) *ಈ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ವಿಶೇಷವಾಗಿ ಭಾಲ್ಕಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಕೆರೆಗಳ ಹೂಳೆತ್ತಲಾಗುವುದು ಹಾಗೂ ಇದಕ್ಕಾಗಿ ಖರ್ಚು ಮಾಡಲಿರುವ ಹಣವೆಷ್ಟು? (ಗ್ರಾಮವಾರು ಅಂಕಿಅಂಶಗಳನ್ನು ಒದಗಿಸುವುದು)*

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ಸಚಿವರು) :

ಅ) ತತ್ಸಂಬಂಧದಲ್ಲಿ ಪ್ರಾಥಮಿಕ ಹಂತವಾಗಿ "ಕರ್ನಾಟಕ ಜಲಸಂವರ್ಧನ ಯೋಜನೆ ಸಂಘ" ಸ್ಥಾಪಿಸಿದ್ದು ಅವರ ಮೂಲಕ 2000-01ನೇ ಸಾಲಿನಿಂದ ಪ್ರಾರಂಭಿಸಿ ಮುಂದಿನ ಐದು ವರ್ಷಗಳಲ್ಲಿ ಹೂಳೆತ್ತುವುದೂ ಸೇರಿದಂತೆ 5000 ಕೆರೆಗಳ ಸಮಗ್ರ ಅಭಿವೃದ್ಧಿ ಕೈಗೊಳ್ಳಲು 995.10 ಕೋಟಿ ರೂ.ಗಳ ಆರ್ಥಿಕ ನೆರವಿಗಾಗಿ ವಿಶ್ವಬ್ಯಾಂಕ್‌ಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ಯೋಜನೆಯ ಉದ್ದೇಶಗಳು ಕೆಳಗಿನಂತಿವೆ.

1. ಹೂಳೆತ್ತುವುದಲ್ಲದೆ ಏರಿ, ತೂಬು, ಕೋಡಿ, ಕಾಲುವೆ ಇತ್ಯಾದಿಗಳ ದುರಸ್ತಿ
2. ಜಲಾನಯನ ಪ್ರದೇಶದ ಅಭಿವೃದ್ಧಿ
3. ರೈತರ ಸಹಭಾಗಿತ್ವದಲ್ಲಿ ಕೆರೆಗಳ ನಿರ್ವಹಣೆ ಪ್ರಸ್ತುತ ಸಾಲಿನಲ್ಲಿ ಸಾಂಕೇತಿಕ ಅನುದಾನವಿದ್ದು ಇಲ್ಲಿಯವರೆಗೆ ವೆಚ್ಚ ಆಗಿರುವುದಿಲ್ಲ.

ಆ) ವಿಶ್ವಬ್ಯಾಂಕ್‌ನ ಕಾರ್ಯವಿಧಾನ ಮತ್ತು ಸಂಪ್ರದಾಯದಂತೆ ಕೆಲವು ಅಧ್ಯಯನಗಳನ್ನು ಕೈಗೊಂಡ ನಂತರ ಅಭಿವೃದ್ಧಿಪಡಿಸುವ ಕೆರೆಗಳನ್ನು ಗುರುತಿಸಬೇಕಾಗಿದ್ದು ಈ ಹಂತದಲ್ಲಿ ವಿವರಗಳು ಲಭ್ಯವಿರುವುದಿಲ್ಲ.

ಇ) ಈ ವರ್ಷ 2000-01ರ, ಇಲಾಖೆಯ ಸಾಮಾನ್ಯ ಆಯವ್ಯಯದಲ್ಲಿ ಅನುಮೋದನೆ ಪಡೆದ ಕೆರೆಗಳ ಹೂಳೆತ್ತುವ ಕಾಮಗಾರಿಗಳ ಪಟ್ಟಿ ಈ ಕೆಳಗಿನಂತಿವೆ.

ಕ್ರಮ ಸಂಖ್ಯೆ	ಕೆರೆಯ ಹೆಸರು	ತಾಲ್ಲೂಕು	ಅಂದಾಜು ಮೊತ್ತ ಲಕ್ಷ ರೂ.	ಅನುದಾನ ಲಕ್ಷ ರೂ.	ಖರ್ಚು 2000-01
1.	ಅಂಬೆಸಾಗಾವಿ ಕೆರೆ	ಭಾಲ್ಕಿ	7.50	2.50	-
2.	ಧನ್ನೂರ ಕೆರೆ	-"-	7.00	2.10	-
3.	ಪರ್ತಾಪೂರ ಕೆರೆ	ಬ. ಕಲ್ಯಾಣ	7.50	2.00	-
4.	ಬೆಟಬಾಲಕುಂಟಾ ಕೆರೆ	-"-	7.50	2.05	-
5.	ತಿಪ್ರಾಂತಕೆರೆ	-"-	7.50	2.25	-
6.	ಅಟ್ಟೂರ ಕೆರೆ	-"-	7.50	2.00	-
7.	ಜಲಸಿಂಗಿ ಕೆರೆ	ಹುಮನಾಬಾದ್	7.50	2.50	-

ಕ್ರಮ ಸಂಖ್ಯೆ	ಕೆರೆಯ ಹೆಸರು	ತಾಲ್ಲೂಕು	ಅಂದಾಜು ಮೊತ್ತ ಲಕ್ಷ ರೂ.	ಅನುದಾನ ಲಕ್ಷ ರೂ.	ಖರ್ಚು 2000-01
8.	ಜಿನಕೇರಾ ಕೆರೆ	-"-	7.50	2.50	-
9.	ಹಳ್ಳಿಖೇಡ ಕೆರೆ	-"-	7.50	2.50	-
10.	ಮಲಕಾಪೂರ ಕೆರೆ	ಬೀದರ್	7.50	2.50	
11.	ಭಾವಗಿ ಕೆರೆ	-"-	7.50	2.50	-
12.	ಮನ್ನಳ್ಳಿ ಕೆರೆ	-"-	8.00	3.90	-
13.	ಗಂಗನಖೇಡ ಕೆರೆ	ಔರಾದ್	7.50	2.50	-
14.	ಹಕ್ಲಾಳ ಕೆರೆ	-"-	7.50	2.50	-

ತೈಲ ಉತ್ಪನ್ನಗಳಿಗೆ ರಾಜ್ಯ ಸರ್ಕಾರ ತೆರಿಗೆ ವಿಧಿಸಿರುವುದು

5090 - ಶ್ರೀ ಪಾಪಣ್ಣ ವಿ. (ಹುಣಸೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತೈಲ ಉತ್ಪನ್ನಗಳಾದ ಡೀಸೆಲ್, ಪೆಟ್ರೋಲ್ ಮತ್ತು ಸೀಮೆ ಎಣ್ಣೆಗಳಿಗೆ ರಾಜ್ಯ ಸರ್ಕಾರವು ವಿಧಿಸಿರುವ ತೆರಿಗೆ ಎಷ್ಟು?*

ಆ) *3 ಉತ್ಪನ್ನಗಳ ಶೇಕಡವಾರು ತೆರಿಗೆ ವಿವರ ನೀಡುವುದು?*

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಡೀಸೆಲ್ - ಶೇ. 15.5

ಪೆಟ್ರೋಲ್ - ಶೇ. 22.0

ಸೀಮೆ ಎಣ್ಣೆ - ಶೇ. 10.0

ಆ) ಡೀಸೆಲ್ - ಶೇ. 10.06

ಪೆಟ್ರೋಲ್ - ಶೇ. 10.0

ಸೀಮೆ ಎಣ್ಣೆ - ಶೇ. 0.50